ಎಂವಿಸಿ.249/2024

ಪಿಡಬ್ಲ್ಯು-1

ದಿನಾಂಕಃ 30-09-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ- ಅರ್ಜಿದಾರರ ಪರವಾಗಿ ಶ್ರೀ.ಜೆ.ಬಿ.ಎಸ್. ವಕೀಲರಿಂದಃ-**

ನನ್ನ ಪ್ಯಾನ್ ಕಾರ್ಡಿನ ನೋಟರಿ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ಮೂಲ ಪ್ರತಿಯೊಂದಿಗೆ ಪರಿಶೀಲಿಸಿ ನಿಪಿ.12 ಎಂದು, ನನ್ನ ಆಧಾರ್ ಕಾರ್ಡಿನ ನೋಟರಿ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ಮೂಲ ಪ್ರತಿಯೊಂದಿಗೆ ಪರಿಶೀಲಿಸಿ ನಿಪಿ.13 ಎಂದು, ಅಪಘಾತಪಡಿಸಿದ ವಾಹನದ ಚಾಲಕನ ಚಾಲನ ಪರವಾನಗಿಯ ದೃಢೀಕೃತ ನಕಲನ್ನು ನಿಪಿ.14 ಎಂದು, ಅಪಘಾತಪಡಿಸಿದ ವಾಹನಕ್ಕೆ ಸಂಬಂಧಪಟ್ಟ ವಿಮಾ ಪಾಲಿಸಿಯ ದೃಢೀಕೃತ ನಕಲನ್ನು ನಿಪಿ.15 ಎಂದು, ನನ್ನ ವಾಹನ ಚಾಲನ ಪರವಾನಗಿಯ ದೃಢೀಕೃತ ನಕಲನ್ನು ಮೂಲ ಪ್ರತಿಯೊಂದಿಗೆ ಪರಿಶೀಲಿಸಿ ನಿಪಿ.16 ಎಂದು ಗುರುತಿಸಲಾಯಿತು.

ಆದ್ದರಿಂದ, ನನ್ನ ಅರ್ಜಿಯನ್ನು ಪುರಸ್ಕರಿಸಿ, ಪರಿಹಾರ ಕೊಡಿಸಿಕೊಡಬೇಕಾಗಿ ಕೇಳಿಕೊಳ್ಳುತ್ತೇನೆ.

**ಪಾಟೀ ಸವಾಲುಃ- ಎದುರುದಾರರ ಪರವಾಗಿ ಶ್ರೀ. ವಕೀಲರಿಂದಃ-**

ಈ ಹಂತದಲ್ಲಿ ವಕೀಲರ ವಿನಂತಿ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ಗಣಕೀಕೃತಗೊಳಿಸಲಾಯಿತು)

ಓ.ಹೇ.ಸಾ.ಸ.ಇ.ಒ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆಎಂಎಫ್‌ಸಿ, ಮಧುಗಿರಿ